## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆ ಹಾಗೂ ಪ್ರೌಢ ಶಾಲೆಗಳಲ್ಲಿ 2018-19ನೇ ಸಾಲಿನ ಶೈಕ್ಷಣಿಕ ಸಾಲಿನ ಮಧ್ಯಾವಧಿಯಲ್ಲಿ ನಿವೃತ್ತರಾಗುವ ಶಿಕ್ಷಕರನ್ನು ಶೈಕ್ಷಣಿಕ ವರ್ಷದ ಅಂತ್ಯದವರೆಗೆ ಮುಂದುವರೆಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ:ಇಡಿ 348 ಪಿಬಿಎಸ್ 2017 ದಿ:25-07-2017
2. ನಿರ್ದೇಶಕರು [ಪ್ರೌಢಶಿಕ್ಷಣ], ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ:ಸಿ.4(6)ಪ್ರೌ.ಶಿ.ಪುನೇ-05/2018-19 ದಿ:14-06-2018

* * *

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (01)ರ ಸರ್ಕಾರದ ಆದೇಶದಲ್ಲಿ ರಾಜ್ಯ ಸರ್ಕಾರಿ ಪ್ರಾಥಮಿಕ/ಪ್ರೌಢ ಶಾಲೆಗಳಲ್ಲಿ 2017-18ನೇ ಸಾಲಿನ ಶೈಕ್ಷಣಿಕ ವರ್ಷದ ಮಧ್ಯಾವದಿಯಲ್ಲಿ ವಯೋನಿವೃತ್ತಿಯಾಗಲಿರುವ ಶಿಕ್ಷಕರುಗಳ ಸೇವೆಯನ್ನು ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಶೈಕ್ಷಣಿಕ ವರ್ಷದ ಅಂತ್ಯದವರೆಗೆ ಕೆಲವೊಂದು ಷರತ್ತುಗಳನ್ನು ವಿಧಿಸಿ, ಮುಂದುವರೆಸಲು ಅನುಮತಿ ನೀಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ(02)ರಲ್ಲಿ ದಿನಾಂಕ :01-05-2018 ರಿಂದ 31-03-2019ರ ವರೆಗೆ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ 1363 ಶಿಕ್ಷಕರು, ಪ್ರೌಢಶಾಲೆಗಳಲ್ಲಿ 515 ಶಿಕ್ಷಕರು ವಯೋನಿವೃತ್ತಿಯಾಗಲಿದ್ದು ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಮಧ್ಯಾವಧಿಯಲ್ಲಿ ನಿವೃತ್ತಿಹೊಂದುವ ಶಿಕ್ಷಕರನ್ನು ವರ್ಷಾಂತ್ಯದವರೆಗೆ ಮುಂದುವರೆಸಲು ಅನುಮತಿ ಕೋರಿ ನಿರ್ದೇಶಕರು(ಪ್ರಾಥಮಿಕ ಶಿಕ್ಷಣ) ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಅಗತ್ಯವಿರುವ ಆಯವ್ಯಯದ ಅಂದಾಜು ವಿವರಗಳೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಈ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಇಡಿ 281 ಪಿಬಿಎಸ್ 2018; ಬೆಂಗಳೂರು, ದಿನಾಂಕ:23/07/2018.**

ಪ್ರಸ್ತಾವನೆಯಲ್ಲಿ ವಿವರಿಸುವ ಅಂಶಗಳ ಹಿನ್ನೆಲೆಯಲ್ಲಿ ರಾಜ್ಯದ ಸರ್ಕಾರಿ ಪ್ರಾಥಮಿಕ/ಪ್ರೌಢಶಾಲೆಗಳಲ್ಲಿ 2018-19ನೇ ಸಾಲಿನ ಶೈಕ್ಷಣಿಕ ವರ್ಷದ ಮಧ್ಯಾವಧಿಯಲ್ಲಿ ಅಂದರೆ ದಿನಾಂಕ :01-05-2018 ರಿಂದ 31-03-2019ರವರೆಗೆ ವಯೋನಿವೃತ್ತಿಯಾಗಲಿರುವ ಒಟ್ಟು 1878 ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರನ್ನು ಶೈಕ್ಷಣಿಕ ವರ್ಷದ ವರ್ಷಾಂತ್ಯದವರೆಗೆ ಅಂದರೆ ದಿನಾಂಕ :31-03-2019ರವರೆಗೆ ಸೇವೆಯಲ್ಲಿ ಮುಂದುವರೆಸಲು, ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಸರ್ಕಾರದ ಅನುಮತಿ ನೀಡಲಾಗಿದೆ.

1) ಈ ರೀತಿ ನೇಮಕಗೊಂಡವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 313(ಬಿ)ರ ಪ್ರಕಾರ ವೇತನವನ್ನು ನಿಗಧಿಪಡಿಸತಕ್ಕದ್ದು.

2) ಶೈಕ್ಷಣಿಕ ವರ್ಷದ ಪ್ರಾರಂಭದ ನಂತರ ಅಂದರೆ 01-05-2018 ರಿಂದ 31-03-2019ರ ಅಂತ್ಯದವರೆಗೆ ನಿವೃತ್ತರಾಗುವ ಶಿಕ್ಷಕರಿಗೆ [ಮಾರ್ಚ್ 2019ರ ತಿಂಗಳವರೆಗೆ ಕಾರ್ಯ ನಿರ್ವಹಿಸಲು] ಮಾತ್ರ ಅನ್ವಯವಾಗತಕ್ಕದ್ದು.

3) ಒಂದು ವೇಳೆ ನೇಮಕಾತಿ ಪ್ರಕ್ರಿಯೆಯು ಅಂತಿಮಗೊಂಡು ಹೊಸ ಶಿಕ್ಷಕರು ನೇಮಕಗೊಂಡಲ್ಲಿ ಇಂತಹ ನೇಮಕಾತಿ ತಾನೇ ತಾನಾಗಿ ರದ್ದುಗೊಳ್ಳತಕ್ಕದ್ದು.

4) ಶಾಲೆಗಳಲ್ಲಿ ಕಾರ್ಯಭಾರ ಇರುವ ಹುದ್ದೆಯೆದುರು ಮಾತ್ರ ಮುಂದುವರೆಸತಕ್ಕದ್ದು; ಹಾಗೂ ತಾಲ್ಲೂಕಿನಲ್ಲಿ ಹೆಚ್ಚುವರಿ ಶಿಕ್ಷಕರು ಲಭ್ಯವಿದೆಯೇ ಎಂಬ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿ ದೃಢೀಕರಿಸಿದ ನಂತರವಷ್ಟೇ ಅನುಮತಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ :ಆಇ 680 ವೆಚ್ಚ-8/2018 ದಿನಾಂಕ :16-07-2018ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಹೆಚ್.ಎಂ. ರಾಘವೇಂದ್ರ)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರಾಥಮಿಕ ಶಿಕ್ಷಣ),
ಶಿಕ್ಷಣ ಇಲಾಖೆ

**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-01**

ಸಂಖ್ಯೆ:ಸಿ4(6)ಪ್ರೌ.ಶಿ.ಪುನೇ-01/2013-14 ದಿನಾಂಕ:21/08/2018

-ಜ್ಞಾಪನಾ-

ಸರ್ಕಾರದ ಆದೇಶ ಸಂಖ್ಯೆ:ಇಡಿ 281 ಪಿಬಿಎಸ್ 2018 ಬೆಂಗಳೂರು ದಿನಾಂಕ:23/07/2018 ರ ಯಥಾಪ್ರತಿಯನ್ನು ರವಾನಿಸುತ್ತಾ. ಸದರಿ ಪತ್ರದಲ್ಲಿ ಆದೇಶಿಸಿರುವಂತೆ ಅಗತ್ಯ ಕ್ರಮವಹಿಸುವಂತೆ ತಿಳಿಸಿ ರವಾನಿಸಿದೆ. ಹಾಗೂ ಸದರಿ ಸರ್ಕಾರದ ಆದೇಶದಂತೆ ನಿವೃತ್ತಿ ನಂತರ ಮುಂದುವರೆದಿರುವ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರ ತಾಲ್ಲೂಕುವಾರು ಮಾಹಿತಿಯನ್ನು ಪ್ರತ್ಯೇಕವಾಗಿ ದಿನಾಂಕ:30/11/2018 ರೊಳಗೆ ಈ ಕಛೇರಿಗೆ ಸಲ್ಲಿಸಲು ತಿಳಿಸದೆ. Email.id: est4cpibng@gmail.com

ನಿರ್ದೇಶಕರು(ಪ್ರೌಢ ಶಿಕ್ಷಣ)ಪರವಾಗಿ

ಗೆ,

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಅಗತ್ಯ ಕ್ರಮಕ್ಕಾಗಿ.
3. ಕಛೇರಿ ಪ್ರತಿ